> ಕಾದಂಬರಿಯಲ್ಲಿ ನನ್ನದೇ ಕಾಲ್ಪನಿಕ ಪಾತ್ರಗಳನ್ನು ಸೃಷ್ಟಿಸುವುದು ಬಹಳ ರೋಮಾಂಚಕ ಸಂಗತಿ. ಅವರವರ ಬದುಕಿನ ಪೇಟೆಂಟ್ ಅವರವರದು. ಹಾಗಿರುವಾಗ, ಆ ಮತ್ತೊಬ್ಬರನ್ನು ಆಧರಿಸಿ ಪಾತ್ರ ಸೃಷ್ಟಿಸಿದರೆ ಕಾಪಿರೈಟ್ ಉಲ್ಲಂಘನೆಯಾದಂತಲ್ಲವೇ?

◆ **ಆ ಕೃತಿ ರಚನೆಗೆ ಸಂಬಂಧಿಸಿದ ಇನ್ನಷ್ಟು ಸಂಗತಿಗಳನ್ನು ತಿಳಿಸಿ.**

ವಲಸೆ ಈ ದೇಶದ ಸಾಂಸ್ಕೃತಿಕ ಇತಿಹಾಸದಲ್ಲಿನ ಬಹುಮುಖ್ಯ ಘಟನೆ ಅನ್ನಿಸುತ್ತದೆ. ಈ ಅರಿವಿನಿಂದಲೇ ಕಾದಂಬರಿಗಳನ್ನು ಬರೆಯುತ್ತಿದ್ದೇನೆ. ದೇಶದಲ್ಲಿ ಅಂತರ್ಯುದ್ಧ ನಡೆದ ಮೇಲೆ ಆಧುನಿಕವಾದದ್ದು, ಹೊಸದು ಅನ್ನುವಂತಹದ್ದು ಘಟಿಸಿದೆ ಅನ್ನಿಸುತ್ತದೆ. ಹಲವಾರು ಸಂಗತಿಗಳು ಬದಲಾಗಿವೆ. ಅದರಲ್ಲೂ ಗುಲಾಮರನ್ನು ಈ ಸಮಯದಲ್ಲಿ ಹೊರಗಟ್ಟುವುದು, ಮಾರಾಟ ಮಾಡುವುದು ಕಂಡುಬಂದಿತು. ಸ್ಥಳೀಯ ಕಾರ್ಮಿಕ ಮಾರುಕಟ್ಟೆಗಳಿಗೆ ಗುಲಾಮರನ್ನು ಕೊಂಡೊಯ್ಯಲಾಯಿತು. ಅವರು ತಮ್ಮ ಸಮಸ್ಯೆಯಿಂದ ಪಾರಾಗಲು ಅಲ್ಲಿಂದ ತಪ್ಪಿಸಿಕೊಂಡು ನಗರಗಳಿಗೆ ವಲಸೆಹೋಗುವ ಪ್ರಯತ್ನ ಮಾಡಿದರು. ಅವರಿಗೆ ನಗರ ಅದ್ಭುತವಾದ ಜಾಗ ಅನ್ನಿಸಿರಬಹುದು.

ನಗರಗಳು ಹೇಗಿದ್ದವು ಎನ್ನುವುದು ಕುತೂಹಲಕರವಾದ ಸಂಗತಿ. ಇಲ್ಲಿ ವರ್ಗಗಳು, ಗುಂಪುಗಳು, ರಾಷ್ಟ್ರೀಯತೆಗಳಿದ್ದವು. ಅವುಗಳದೇ ಗಡಿಗಳಿದ್ದವು. ಇವುಗಳ ನಡುವೆ ಬದುಕುವುದು ರೋಮಾಂಚನಕಾರಿ ಅನುಭವ ಎಂದುಕೊಂಡರು. ಸಂಗೀತ ಹೇಗೆ ಈ ದೇಶವನ್ನು ಬದಲಿಸಿತು ಎನ್ನುವುದು ಕೂಡ ಆಸಕ್ತಿಕರ ಸಂಗತಿ. ಚರ್ಚಿನ ಹಾಡುಗಳು, ಕೆಲಸದವರ ಗೀತೆಗಳು ತಪ್ಪಿಸಿಕೊಂಡು ಹೋಗಬೇಕೆಂದವರ ಹಂಬಲಕ್ಕೆ ಅಕ್ಷರಶಃ ದನಿಯಾದವು.

ಆ ದಿನಗಳ ವೈಯುಕ್ತಿಕ ಬದುಕು ಹೇಗಿತ್ತು? ಜನ ಪರಸ್ಪರರನ್ನು ಹೇಗೆ ಪ್ರೀತಿಸುತ್ತಿದ್ದರು? ಅವರ ಪ್ರಕಾರ ಸ್ವತಂತ್ರವಾಗಿರುವುದು ಎಂದರೇನು? ಗುಲಾಮರು ತಮ್ಮ ಉಸಿರುಗಟ್ಟಿಸಿ ಕೊಲ್ಲುತ್ತಿದ್ದ ಪರಿಸರದಿಂದ ತಪ್ಪಿಸಿಕೊಂಡು ನಗರಗಳತ್ತ ಓಡಿಬರುತ್ತಿದ್ದರು. ಆ ಸಮಯದಲ್ಲಿನ ಅವರ ಜಾಝ್ ಸಂಗೀತವನ್ನು ನೋಡಿದರೆ ಅದು ಪ್ರೀತಿಯ ಬಗ್ಗೆ, ಕಳೆದುಕೊಂಡಿದ್ದರ ಬಗ್ಗೆ ಇರುವುದು ತಿಳಿಯುತ್ತದೆ. ಆ ಸಾಹಿತ್ಯದಲ್ಲೊಂದು ಹೆಮ್ಮೆ, ಸಂತೃಪ್ತಿ ಇದೆ. ತಾವು ಪ್ರೀತಿಸಿದವರು ತೊರೆದು ಹೋದಾಗಲೂ ಕೊರಗುತ್ತಾ ಕೂರುವುದಿಲ್ಲ. ಪ್ರೀತಿಯಾಗಲಿ, ಭಾವನೆಯಾಗಲಿ, ಅದನ್ನು ಕಳೆದುಕೊಳ್ಳುವುದಾಗಲಿ ಎಲ್ಲವೂ ಅವರ ಆಯ್ಕೆ. ನೀವು ಯಾರನ್ನು ಪ್ರೀತಿಸುವಿರಿ ಎನ್ನುವ ಆಯ್ಕೆ ಬಹು ದೊಡ್ಡ ಸಂಗತಿ. ಪ್ರೀತಿಯ ಸ್ವಾತಂತ್ರ್ಯವನ್ನು ಸಂಗೀತ ಬಲವಾಗಿ ಪ್ರತಿಪಾದಿಸಿತು.

ಜಾಝ್ ಸಂಗೀತವನ್ನು ದೆವ್ವದ ಸಂಗೀತವೆಂದು ಪರಿಗಣಿಸಲಾಯಿತು. ಅದು ಬಹಳ ಐಂದ್ರಿಕವಾಗಿದೆ, ಪ್ರಚೋದನಕಾರಿಯಾಗಿದೆ ಎಂದೆಲ್ಲ ಹೇಳಲಾಯಿತು. ಆದರೆ, ಕರಿಯರಿಗೆ ಈ ಸಂಗೀತ ತಮ್ಮ ದೇಹದ ಮೇಲಿನ ಹಕ್ಕನ್ನು ಪ್ರತಿಪಾದಿಸುವ ಬಗೆಯಾಗಿತ್ತು. ತಮ್ಮ ಭಾವನೆಗಳ ಒಡೆತನ ತಮ್ಮದೇ ಎನ್ನುವುದನ್ನು ಈ ಸಂಗೀತ ಪ್ರತಿಬಿಂಬಿಸಿತು. ದುರಂತವನ್ನು ಕೂಡ ಈ ಸಂಗೀತದಲ್ಲಿ ಸಂಭ್ರಮಿಸಲಾಯಿತು. ಈಗ ಟೀವಿ ಜಾಹೀರಾತುಗಳಲ್ಲಿ ಜಾಝ್ ಸಂಗೀತವನ್ನು ವಿಶ್ವಾಸಾರ್ಹತೆ, ಆಧುನಿಕತೆಯನ್ನು ಬಿಂಬಿಸಲು ಬಳಸಲಾಗುತ್ತದೆ.

◆ **ನಗರವು ಮಾಜಿ ಗುಲಾಮರಿಗೆ ತಮ್ಮ ಗತದಿಂದ ಬಿಡುಗಡೆ ತಂದುಕೊಟ್ಟಿತೆ?**